**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.588/2023**

**CW -10 PW-9**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮೌಲಮ್ಮ |
| ಗಂಡ | ಃ | ಮಹ್ಮದ ಸಾಬ |
| ವಯಸ್ಸು | ಃ | 55 |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಕ್ಯಾಡಾಲ |
| ಪ್ರಮಾಣಿಕರಿಸಿದ ದಿನಾಂಕ | ಃ | **24-04-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಈಗ 4 ವರ್ಷಗಳ ಹಿಂದೆ ನಮ್ಮ ಅಳಿಯ ಜಮೀನಿನಲ್ಲಿ ಕುಂಟೆ ಹೊಡೆಯಲು ನಾವು ನಮ್ಮ ಮನೆಯವರು ಹಿರೇರಾಯಕುಂಪಿಯ ಜಮೀನಿನಲ್ಲಿ ಕುಂಟೆ ಹೊಡೆಯಲು ಹೋಗಿರುತ್ತೇವೆ. ನಾನು ಫಾತೀಮಾಳ ಮಕ್ಕಳನ್ನು ಹಿಡಿದುಕೊಂಡು ಕುಳಿತಿದ್ದಾಗ ಆರೋಪಿತರು ಬಂದು ಹೊಡೆದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು:-</u> ಮಾನ್ಯ ಸ.ಸ.ಅ ರವರಿಂದ

ದಿನಾಂಕ 24.04.2022 ರಂದು ಫಾತೀಮಾ ಮತ್ತು ಆಕೆ ತಂದೆ ಮಹ್ಮದ್ ಸಾಬ ನಮಗೆ ಫಾತೀಮಾಳ ಗಂಡನಿಗೆ ಸೇರಿದ ಹಿರೇ ರಾಯಕುಂಪಿ ಗ್ರಾಮದಲ್ಲಿನ ಸ.ನಂ.163 ರಲ್ಲಿ 6 ಎಕರೆ ಇದ್ದು ಅದರಲ್ಲಿ ಗಳೆ ಹೊಡಿಯೋಣ ಅಂತ ಹೇಳಿ ನಮ್ಮನ್ನು ಕರೆದುಕೊಂಡು ಮಧ್ಯಾಹ್ನ 12.30 ಗಂಟೆಗೆ ಜಮೀನಿಗೆ ಹೇದಾಗ ಸದರಿ ಜಮೀ,ನಿನಲ್ಲಿ ಲೀಜು ಮಾಡುತ್ತಿದ ಅಕ್ಬರ ತಂದೆ ಖಾಜಹುಸೇನ ಇದ್ದು ಆತನಿಗೆ ಫಾತೀಮಾ ಆತನ ತಂದೆ ಈ ವರ್ಷ ನಾವು ಸಾಗುವಳಿ ಮಾಡುತ್ತೇವೆ ಎಂದು ಹೇಳಿದ್ದು ಹೊಲದಲ್ಲಿ ಮಾತನಾಡುತ್ತಿದ್ದಾಗ ಆರೋಪಿತರು ಬಂದು ನಮ್ಮ ಜೊತೆ ಜಗಳ ತೆಗೆದು 2 ನೇ ಆರೋಪಿ ಸಂಶುದ್ದೀನ್ ತನ್ನ ಕೈಯಲಿದ್ದ ಕಟ್ಟಿಗೆಯಿಂದತ ತಲೆಗೆ ಹೊಡೆದು ಸೂಳೇ ಎಂದು ಅವಾಚ್ಯವಾಗಿ ಬೈದು ಕಾಲನಿಂದ ಒದ್ದು ಕೈಗಳಿಂದ ಮೈಗೆ ಹೊಡೆದಿದ್ದು ನಂತರ ಶಂಶುದ್ದೀನ್ ಫಾತೀಮಾಳ ತಂದೆಗೆ ಬಲಗೈಗೆ ಹೊಡೆದು ಗಾಯ ಮಾಡಿ, ಸಣ್ಣ ಶಾಲಂ

ಇಸ್ಮಾಯಿಲನಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದು ರಕ್ತ ಗಾಯ ಮಾಡಿ, ರಸೂಲ್ ಸಾಬನಿಗೆ ಶಾಹಿದ್ ಕಟ್ಟಿಗೆಯಿಂದ ಕಾಲಿಗೆ ಹೊಡೆದು ಗಾಯ ಮಾಡಿ, ಲೀಜಿಗೆ ಮಾಡುತ್ತಿದ್ದ ಈ ಹೊಲವನ್ನು ನಾನೇ ಲೀಜಿಗೆ ಮಾಡುತ್ತೇನೆ ಯಾವ ಸೂಳೇ ಮಗ ಹೊಲದ ತಂಟೆಗೆ ನಾನು ನೋಡುತ್ತೇನೆ. ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ಸುಟ್ಟು ಬಿಡುತ್ತೇನೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. AP ವಕೀಲರಿಂದ.**

ಫಾತೀಮಾ ನನ್ನ ಸ್ವಂತ ಮಗಳು. ಘಟನೆ ನಡೆದ ದಿನ ಠಾಣೆಗೆ ಹೋಗಿರುತ್ತೇವೆ. ಅದೇ ದಿನ ಹೇಳಿಕೆ ನೀಡಿರುತ್ತೇನೆ. ಪೋಲಿಸರು ನನ್ನ ವಯಸ್ಸು ಕೇಳಿಲ್ಲ ನಾನು ಹೇಳಿಲ್ಲ. ಪೋಲಿಸರು ನನ್ನ ವಯಸ್ಸನ್ನು 38 ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಯಸ್ಸು 38 ಎಂದು ನಾನು ಪೋಲಿಸರಿಗೆ ಹೇಳಿಲ್ಲ. ಸದರಿ ಜಮೀನಿಗೆ ಟ್ರಾಕ್ಟರ ತೆಗೆದುಕೊಂಡು ಅರಗಲು ಹೋಗಿರುತ್ತೇವೆ. ಸದರಿ ಟ್ರಾಕ್ಟರ ನಮ್ಮದು ಆಗಿರುತ್ತದೆ. ಯಾವ ಸಮಯಕ್ಕೆ ಜಮೀನಿಗೆ ಹೋಗಿರುತ್ತೇವೆ ಎಂದು ಸಮಯ ಹೇಳಲು ಬರುವುದಿಲ್ಲ. ಜಮೀನಿನಲ್ಲಿ 1-2 ಸಾಲು ಕುಂಟೆ ಹೊಡೆಯುವಷ್ಟರಲ್ಲಿ ಆರೋಪಿತರು ಬಂದಿರುತ್ತಾರೆ. ನಾನು ಸದರಿ ಜಮೀನಿನಲ್ಲಿ ಗಿಡ ಇಲ್ಲದೇ ಇರುವುದರಿಂದ ಬೇರೆಯರ ಜಮೀನಿನಲ್ಲಿನ ಗಿಡದ ಹತ್ತಿರ ಕುಳಿತಿದ್ದೆ. ಗಿಡದ ಬಳಿ ನಾನು ಕುಳಿತಾಗ ಜಗಳ ಆಗಿರುತ್ತದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಪೋಲಿಸರು ನನ್ನನ್ನು ಕೇಳಿಲ್ಲ ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ನನ್ನನ್ನು ಯಾವುದೇ ವಿಷಯ ಕೇಳಿರುವುದಿಲ್ಲ ನಾನು ಹೇಳಿರುವುದಿಲ್ಲ. ನನ್ನ ಮಗಳು ಕ್ಯಾಡಾಲ ಗ್ರಾಮದಲ್ಲಿ ಆಶ ಕಾರ್ಯಕರ್ತೆಯಾಗಿರುತ್ತಾಳೆ. ಮದುವೆ ಆದಾಗಿನಿಂದ ನನ್ನ ಅಳಿಯ ಕ್ಯಾಡಾಲ ಗ್ರಾಮದಲ್ಲಿ ಇದ್ದು ಆಗಾಗ ಹೋಗಿ ಆಗಾಗ ಹನುಮಪುರು ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದ, ಈಗ 2 ವರ್ಷಗಳಿಂದ ಆಕೆಡೆಗೆ ಹೋಗಿರುತ್ತಾನೆ. ನನ್ನ ಅಳಿಯ ಮಗಳನ್ನು ಕರೆದುಕೊಂಡು ಹೋಗಲು ಸಿದ್ದನಿದ್ದರು ನನ್ನ ಮಗು ಹೋಗಲು ಸಿದ್ದಳಿಲ್ಲ ಮತ್ತು ನಾವು ಕಳಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಮಗಳು ಹೋಗಿ ಇರಲು ಮನೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಳಿಯನಿಗೆ ಹನುಮಪೂರು ಗ್ರಾಮದಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ಹನುಮಪೂರು ಗ್ರಾಮದಲ್ಲಿನ ಮನೆಯಲ್ಲಿ ನನ್ನ ಅಳಿಯ ವಾಸವಿರುತ್ತಾನೆ ಎಂದರೆ ಸರಿಯಲ್ಲ. ಅಳಿಯನಿಗೆ ಇಲ್ಲೆ ಬಂದು ಇರು ಎಂದು ಕರೆದಿರುತ್ತೇವೆ ಎಂದರೆ ಸರಿ. ಅದಕ್ಕೆ ನಮ್ಮ ಊರಿನಲ್ಲಿ ಇರುತ್ತೇನೆ ನನ್ನ ಹೆಂಡತಿ ಮಕ್ಕಳನ್ನು ಕಳಿಸಿ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಳಿಯ ನಮ್ಮ ಜೊತೆ ಇರಲು ಬಾರದೇ ಇದುದ್ದರಿಂದ ಯಾವುದೇ ಘಟನೆ ನಡೆಯದಿದ್ದರೂ

ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮತ್ತು ಇತರರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲು ಮಾಡಿದ್ದರಿಂದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ನ್ಯಾಯಾಲಯ, ದೇವದುರ್ಗ.**

**CC No.588/2023**

**CW -9 PW-8**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಾಬು |
| ತಂದೆ | ಃ | ಖಾಸಿಂಸಾಬ ಉರ್ಫ ಗುಡುಬಾಯ |
| ವಯಸ್ಸು | ಃ | 53 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಕ್ಯಾಡಾಲ |
| ಪ್ರಮಾಣಿಕರಿಸಿದ ದಿನಾಂಕ | ಃ | **24-04-2026** |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು ಚಾಸಾ-4, 5, ರಸೂಲ್ 5-6 ಜನರು ದಿನಾಂಕ 24.04.2022 ರಂದು ಹಿರೇರಾಯಕುಂಪಿಯ ಚಾಸಾ-4 ರವರ ಗಂಡನ ಜಮೀನಿನಲ್ಲಿ ಕುಂಟೆ ಹೊಡೆಯಲು ಹೋಗಿರುತ್ತೇವೆ. ಆಗ ಜಮೀನಿನಲ್ಲಿ 1 ರಿಂದ 4 ನೇ ಆರೋಪಿತರು ಇದ್ದು 2 ನೇ ಆರೋಪಿ ಫಾತೀಮಾ ಬಲ ತಲೆಗೆ ಕಟ್ಟಿಗೆಯಿಂದ ಹೊಡೆದು ರಕ್ತಗಾಯ ಮಾಡಿರುತ್ತಾರೆ. 1 ನೇ ಆರೋಪಿ ಫಾತೀಮಾಗೆ ಅವಾಚ್ಯವಾಗಿ ಬೈದಿರುತ್ತಾನೆ. ಜಮೀನಿಗೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು 4 ನೇ ಆರೋಪಿ ಜೀವದ ಬೆದರಿಕೆ ಹಾಕಿರುತ್ತಾನೆ. ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರ ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲವೆಂದು ಹೇಳಿರುತ್ತಾರೆ.

**ಪಾಟೀ ಸವಾಲು:- ಆರೋಪಿ ಪರ ಶ್ರೀ. AP ವಕೀಲರಿಂದ.**

ಫಾತೀಮಾ ಸಂಬಧಂದಲ್ಲಿ ಮಾವನ ಮಗಳು ಆಗಬೇಕು. ನಾನು ಕ್ಯಾಡಾಲ ಗ್ರಾಮದವನು. ಫಾತೀಮಾ ಕ್ಯಾಡಾಲ ಗ್ರಾಮದಲ್ಲಿ ಆಶ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಾಳೆ. ಜೀವನಾಂಶ ಕೋರಿ ಫಾತೀಮಾ ದಾವೆ ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ಜಮೀನು ಸ.ನಂ. ಹೇಳಲು ಬರುವುದಿಲ್ಲ. ಸಣ್ಣ ಶಾಲಂ ಭಾಗಕ್ಕೆ 10 ಎಕರೆ ಬರುತ್ತದೆ ಎಂದು ಹೇಳಿರುತ್ತಾರೆ. ನಾವು ಹೋಗಿರುವ ಜಮೀನು 10 ಎಕರೆ ಇರುತ್ತದೆ. ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ಹಿರೇರಾಯಕುಂಪಿಯಲ್ಲಿ 6 ಎಕರೆ ಹನುಮಪೂರು ಗ್ರಾಮದಲ್ಲಿ 4 ಎಕರೆ ಇರುತ್ತದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಪೋಲಿಸರು ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆ ಗೊತ್ತಿಲ್ಲ. ಸಣ್ಣ ಶಾಲಂ ಮದುವೆಯಾದಾಗಿನಿಂದ 3 ಮಕ್ಕಳು ಆಗುವವರೆಗೆ ಫಾತೀಮಾಳ ಜೊತೆ ಕ್ಯಾಡಾಲ ಗ್ರಾಮದಲ್ಲಿ ಇದ್ದ.

ಸಣ್ಣ ಶಾಲಂ ಹನುಮಪೂರು ಗ್ರಾಮದವನು ಆಗಿರುತ್ತಾನೆ. ಸಣ್ಣ ಶಾಲಂನಿಗೆ ಹನುಮಪೂರು ಮತ್ತು ಹಿರೇರಾಯಕುಂಪಿ ಗ್ರಾಮಗಳಲ್ಲಿ ಜಮೀನು ಇರುತ್ತದೆ ಮನೆ ಇರುವುದಿಲ್ಲ. ಸಣ್ಣ ಶಾಲಂ ತನ್ನ ಹೆಂಡತಿ ಫಾತೀಮಾಗೆ ಹನುಮಪೂರು ಗ್ರಾಮಕ್ಕೆ ಹೊಗೋಣ ಅಂತ ಕರೆದ ವಿಷಯ ನನಗೆ ಗೊತ್ತಿಲ್ಲ. ಸಣ್ಣ ಶಾಲಂ ಹನಮಪೂರು ಗ್ರಾಮಕ್ಕೆ ಬಂದ ನಂತರ ಆತನೊಂದಿಗೆ ಫಾತೀಮಾ ಬಂದಿರಲಿಲ್ಲ ಎಂದರೆ ಸಣ್ಣ ಶಾಲಂಗೆ ಮನೆ ಇಲದಿದ್ದರಿಂದ ಫಾತೀಮಾ ಬಂದಿರುವುದಿಲ್ಲ. ಸಾಮಾನ್ಯವಾಗಿ ಮನೆ ಇರಲಿ ಅಥವಾ ಇಲ್ಲದೇ ಇರಲಿ ಗಂಡನ ಜೊತೆ ಹೆಂಡತಿ ಇರುತ್ತಾಳೆ ಎಂದರೆ ಸಾಕ್ಷಿ ಇರುತ್ತಾರೆ ಆದರೆ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಣ್ಣ ಶಾಲಂಗೆ ಕ್ಯಾಡಾಲದಲ್ಲಿ ಬಂದು ಇರುವಂತೆ ನಾವು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಣ್ಣ ಶಾಲಂ ಬರಲು ನಿರಾಕರಿಸಿದ್ದಕ್ಕೆ ಆತನ ಜಮೀನಿನಲ್ಲಿ ಕುಂಟೆ ಹೊಡೆಯಲು ಹೋಗಿ ಅವರಿಗೆ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಇತರರ ವಿರುದ್ಧ ಸಣ್ಣ ಶಾಲಂ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿದ್ದರಿಂದ ಯಾವುದೇ ಘಟನೆ ಆಗದೇ ಇದ್ದರು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿ ಫಾತೀಮಾಳ ತಲೆಗೆ ಕಟ್ಟಿಗೆಯಿಂದ ಹೊಡೆದು ರಕ್ತ ಗಾಯ ಮಾಡಿರುತ್ತಾನೆ ಮತ್ತು 1 ನೇ ಆರೋಪಿ ಅವಾಚ್ಯವಾಗಿ ಬೈದಿರುತ್ತಾನೆ ಮತ್ತು 4 ನೇ ಆರೋಪಿ ಜೀವದ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಫಾತೀಮಾಳ ಸಂಬಧಿಯಾಗಿದ್ದರಿಂದ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.